CC-O. In Public Domain. Digitized by eGangotri

సంసారం

గంగాధర చిత్రాలు

ook.O

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪರ್ಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾಧರ ಚಿತ್ತಾಲರ ಈ ಮೊದಲ ಕವನ ಸಂಗ್ರಹಗಳು :

1. ಕಾಲದ ಕರೆ (1948)
2. ಮನುಕುಲದ ಹಾಡು (1961)
3. ಹರಿವ ನೀರಿದು (1970)

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪರ್ಕ

ಗಂಗಾಧರ ಚಿತ್ತಾಲ

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

SAMPARKA—A collection of Poems by Gangadhara Chittala and Published by G. K. Anantharam for IBH Prakashana Fifth Main Gandhinagar Bangalore-560 009

© ಸರ್ವಸ್ವಾಮ್ಯ ಲೇಖಕರದು 1983

ಬೆಲೆ ರೂ. 6-00

ಮೊದಲನೆಯ ಮುದ್ರಣ : 1983 ಪ್ರಕಾಶಕರು, ಜಿ. ಕೆ. ಅನಂತರಾಮ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿವಂದನೆ

'ಪೊದೆಯೊಳಡಗಿದ ಕರಿಯ ಭಲ್ಲ ದುರ್ವಿಧಿ ಕೊಲದೆ
ಕಳ್ಳತನದಲಿ ಮೈಯನಷ್ಟೆ ಭೇದಿಸಿ ಭಾಲೆಯೆಸೆದಿದ್ದ
ನಿಷ್ಕಾರಣ ಕೌರ್ಯದಿಂದ'

'ಜೀವಕ್ಕೆ ಬಿಗಿದ ಘಟಸರ್ಪವಾಯಿತು ದೇಹ'
('ದುಃಖಿಗೀತ')

ಶ್ರೀ ಗಂಗಾಧರ ಚಿತ್ತಾಲರ 'ದುಃಖಿಗೀತ'ದೊಳಗಿನ ಮೇಲಿನ ಎರಡು ಅವತರಣಿಕೆಗಳು ಬದುಕು ಮತ್ತು ಸಾವುಗಳ ನಿಗೂಢ ಸಂಬಂಧದ ವ್ಯಂಗ್ಯದ ಅನುಭವವನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತವೆ. ಅಸಹನೀಯವಾದ ಚರ್ಮರೋಗದಿಂದ ಬಳಲುತ್ತಿದ್ದ ತಂದೆ ನಿರಂತರವಾದ ನೋವಿನಿಂದ ತಪ್ಪಿಸಿಕೊಳ್ಳಲು ಸಾವು ಕರೆದ ಕಡೆಗೆ ನಡೆದು ಹೋದ ಘಟನೆಯ ಅರ್ಥವನ್ನು ತಿಳಿದುಕೊಳ್ಳಲು ಚಿತ್ತಾಲರು 'ದುಃಖಿಗೀತ'ದಲ್ಲಿ ಅನೇಕ ಉಪಾಯಗಳನ್ನು ಹೂಡಿಕೊಂಡಿದ್ದಾರೆ. ತಂದೆಯ ಬಾಳಿನ ದುರ್ವಿಧಿ ಪೊದೆಯೊಳಗೆ ಅಡಗಿ ಕೊಂಡು ನಿಷ್ಕಾರಣ ಕೌರ್ಯದಿಂದ ಭಾಲೆಯೆಸೆದಿದ್ದ ಚಿತ್ರ ಈ ಘಟನೆಯ ನಿಗೂಢತೆಯನ್ನು ಸರಿಯಾಗಿ ಪ್ರತಿಫಲಿಸುತ್ತದೆ. ಜೀವದ ಅಭಿವ್ಯಕ್ತಿಯಾಗ ಬೇಕಾದ ದೇಹ ಘಟಸರ್ಪವಾಗುವದು ಇನ್ನೊಂದು ರಹಸ್ಯಪೂರ್ಣವಾದ ಘಟನೆಯಾಗಿದೆ. ನಿಗೂಢವಾದ ಅನುಭವವನ್ನು ತಿಳಿದುಕೊಳ್ಳಲು ಸಾಧ್ಯವಾಗದಿದ್ದರೂ ಅರ್ಥಮಾಡಿಕೊಳ್ಳುವ ಉತ್ಕೃಷ್ಟವಾದ ಕಾವ್ಯರೀತಿಯೆಂದರೆ ಇದೇ. ಕೇಳಿದ ಪ್ರಶ್ನೆಗೆ ಮಾರ್ದನಿಯಂತೆ ಮರುಪ್ರಶ್ನೆ ಬಂದರೂ ಕೂಡ ಅವುಗಳ ಮುಖಾಮುಖಿ ಬದುಕನ್ನು ಸಹ್ಯವಾಗಿಸುತ್ತದೆ. ಗಂಗಾಧರ ಚಿತ್ತಾಲರು ದಿಲ್ಲಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಅವರನ್ನು ಭೆಟ್ಟಿಯಾಗಿದ್ದೆ. ಆಗ ಅವರು ದಶೋಪನಿಷತ್ತುಗಳನ್ನು ಓದುತ್ತಿದ್ದರು. ಕೇನೋಪನಿಷತ್ತಿನ ಮೊದಲ ಪ್ರಶ್ನೆಯನ್ನು ಉದಾಹರಿಸುತ್ತ ಅವರು ಹೇಳಿದ್ದು : 'ಪ್ರಶ್ನೆಗೆ ಸಿಕ್ಕ ಉತ್ತರ ಒಪ್ಪಿಗೆಯಾಗಲಿ ಆಗದಿರಲಿ ಇಂದಿಗೂ ಮುಂದೆಯೂ ಕೇಳಬೇಕಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಶ್ನೆಗಳಿವು.' ಮೊದಲಿನಿಂದಲೂ ಗಂಗಾಧರ ಚಿತ್ತಾಲರ ಕಾವ್ಯ ಇಂಥ ಪ್ರಶ್ನೆಗಳನ್ನು ಕೇಳುತ್ತಲೇ ಬಂದಿದೆ.

ಗಂಗಾಧರ ಚಿತ್ತಾಲರ 'ಸಂಪರ್ಕ' ಎಂಬ ಈ ಕವನ ಸಂಗ್ರಹದಲ್ಲಿ ಇತ್ತೀಚೆಗೆ ಅವರು ಬರೆದಿರುವ ಕವಿತೆಗಳಿವೆ. 'ಸಂಪರ್ಕ' ಎಂಬ ಕವಿತೆಯಲ್ಲಿ ಸೃಷ್ಟಿಕ್ರಮವನ್ನು ಕಾಣುವ ವಿಸ್ಮಯದ ಭಾವ ಪ್ರಕಟವಾಗಿದೆ. ಅವರ ಮಗಳು ಸಾಲೆಯಲ್ಲಿ ಹೇಳಿದ್ದರೆಂದು ಐದನೆಯ ಮಜಲಿನಲ್ಲಿ ಬಿತ್ತಿ ಬೆಳೆಯುವ ವ್ಯಾಪಾರದಲ್ಲಿ ನಿರತಳಾಗಿದ್ದಾಳೆ. ಹೊಲ ಗದ್ದೆಗಳನ್ನು ಕಣ್ಣಿಂದ ಕಾಣದ ಈ ಮಕ್ಕಳು ನಡೆಸಿದ ಈ ಚಟುವಟಿಕೆ ಕವಿಯ ಕುತೂಹಲವನ್ನು ಕೆರಳಿಸುತ್ತದೆ. ಮಣ್ಣು ನೀರುಗಳ ಸಂಯೋಗದಲ್ಲಿ ಹುಟ್ಟಿ ಬೆಳೆಯುವ ಅಂಕುರಗಳು ಗಂಗಾಧರ ಚಿತ್ತಾಲರ ಕಾವ್ಯಕ್ಕೆಲ್ಲ ಬೆನ್ನೆಲುಬಾಗಿರುವ ಅದಮ್ಯವಾದ ಆಶಾವಾದವನ್ನು ಪ್ರಕಟಿಸುತ್ತದೆ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಬದುಕು ತನ್ನ ಜೀವಸತ್ವವನ್ನು ಪ್ರಕಟಿಸಿಯೇ ತೀರುತ್ತದೆಂಬ ವಾಸ್ತವ ಸತ್ಯ ಮೊದಲಿಂದಲೂ ಗಂಗಾಧರ ಚಿತ್ತಾಲರ ಕಾವ್ಯಕ್ಕೆ ಅವಿಚ್ಛಿನ್ನವಾದ ಪ್ರೇರಣೆಯನ್ನು ಒದಗಿಸಿದೆ. ಬಾವಿಯ ಕಲ್ಲುಗೋಡೆಯನ್ನು ಸೀಳಿ ಬೆಳೆಯುವ ಆಲದ ಮರ, ಬಚ್ಚಲ ನೀರಿನಲ್ಲಿ ಕೂಡ ನಳನಳಿಸುವ ಮಲ್ಲಿಗೆ ಬಳ್ಳಿ ಮುಂತಾದ ಜೀವ ಪ್ರತೀಕಗಳನ್ನು ಅವರು ಮೊದಲು ಕೂಡ ತಮ್ಮ ಕಾವ್ಯದಲ್ಲಿ ಉಪಯೋಗಿಸಿದ್ದರು. ಇದೇ ಸತ್ಯದ ಇನ್ನೊಂದು ಮಗ್ಗುಲು 'ಗುಲ್‌ಮೊಹರ್' ಎಂಬ ಕವಿತೆಯಲ್ಲಿ ಮನೋಜ್ಞವಾಗಿ ಪ್ರಕಟವಾಗಿದೆ. ಮೂವತ್ತು ವರ್ಷಗಳಿಂದ ಮುಚ್ಚಿಲ್ಲದೆ ಯೌವನದ ಸೆಡವಿನಲ್ಲಿ ನಿಂತ ಗುಲ್‌ಮೊಹರದ ಗಿಡವನ್ನು ನೋಡಿದಾಗ ಕವಿಗೆ ಅಷ್ಟೇ ಅವಧಿಯಲ್ಲಿ ತನ್ನ ಜೀವನದಲ್ಲಿ ಆಗಿರುವ ಏರಿಳಿತಗಳ ಅವಸ್ಥಾಂತರಗಳ ತೀವ್ರವಾದ ಅರಿವನ್ನುಂಟುಮಾಡುತ್ತದೆ. ಮನುಷ್ಯನ ಬದುಕಿಗೂ ಮತ್ತು ಪ್ರಕೃತಿಯ ಬದುಕಿಗೂ ಇರುವ ಈ ವಿರೋಧ ಕವಿಯ ವಿಸ್ಮಯವನ್ನು ಕೆರಳಿಸಿದೆ. ಆದರೆ ಈ ಎರಡು ಜೀವಗಳ ಸಂಪರ್ಕದಲ್ಲಿ ಕಹಿ ಇಲ್ಲದಿರುವುದು ಈ ಕಾವ್ಯದ ದೊಡ್ಡತನವಾಗಿದೆ.

ಈ ಸಂಗ್ರಹದ ಉಳಿದ ಕವಿತೆಗಳು ಬಹಳ ನೋವಿನ ಕವಿತೆಗಳಾಗಿವೆ. ಒಂದು ಗುಣವಾಗದ ಆದರೆ ಕೊಲ್ಲದ ಬೇನೆಯಿಂದ ನರಳುತ್ತಿರುವ ಕವಿ ಆ ನೋವಿನ ಅನುಭವಕ್ಕೆ ಅದ್ಭುತವೆನ್ನಬಹುದಾದ ಅಭಿವ್ಯಕ್ತಿಯನ್ನು ಕೊಟ್ಟಿದ್ದಾರೆ. ಆದರೆ ಎಂಥ ದುರ್ಧರವಾದ ಪರಿಸ್ಥಿತಿಯಲ್ಲೂ ಗಂಗಾಧರ ಚಿತ್ತಾಲರು ಜೀವನ ವಿಮುಖವಾದ, ಜೀವನ ವಿರೋಧಿಯಾದ ಕಾವ್ಯವನ್ನು ಬರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಲ್ಲ. ಅವರು ಹಿಂದೆ ಬರೆದಿದ್ದ ಕವಿತೆಗಳಲ್ಲಿ ವ್ಯಕ್ತವಾಗಿದ್ದ ಉಕ್ಕಿಬರುವ ಸುಖ (ಉದಾಹರಣೆಗೆ 'ಖುಶಿ', 'ಐದು ಸಮುದ್ರಗೀತೆಗಳು') ಈಗ ಕುದಿದು ಬರುವ ನೋವಾಗಿದೆ. ಆದರೆ ಇವೆರಡೂ ಅನುಭವಗಳು ಅವರ ಜೀವಂತವಾದ ಸಂವೇದನೆಯ ಫಲವಾಗಿವೆ :

ಅಯ್ಯಾ, ಬದುಕ ಮೂಲಕಿಹ ಸುಖವಿದು
ಎಂಥ ಪೊರೆಯಡಿಗೂ ಹಿಗ್ಗುವ ಮುಖವಿದು
ಹುಟ್ಟಿನಿಂದಲೇ ಇರವಿಗೆ ನಮ್ಮನು ಕಟ್ಟಿ ಹಿಡಿದ ಬಂಧ.

ಯಾವರ್ಥಪೂರ್ಣ ಸಂಕೇತಗಳ ಯೋಜಿಸಲಿ
ಈ ಅನರ್ಥವ ಮೂರ್ತಿಗೊಳಿಸೆ
ಯಾವ ಸಮರ್ಥ ಪ್ರತಿಮಾ ವಿಧಾನ ?
ಮಾತು ಸಾಲದು ಇಲ್ಲಿ. ನಾಲಗೆಯು
ಸೋಲುತ ಬಂತು.
ಬದುಕಾಗುತಿದೆ ಅರ್ಥಹೀನ.

ಈ ಎರಡೂ ಅವತರಣಿಕೆಗಳ ಹಿಂದಿನ ಸಂವೇದನೆ ಜೀವಂತವಾಗಿರುವದನ್ನು ಅದರ ಅಭಿವ್ಯಕ್ತಿಯೇ ಸ್ಪಷ್ಟಗೊಳಿಸುತ್ತದೆ. ಎರಡನೆಯ ಅವತರಣಿಕೆ ತೀರ ಇತ್ತೀಚಿನದು. ಅದರಲ್ಲಿಯ ಸಂವೇದನೆಯ ಸಜೀವತೆ ಮತ್ತು ಉತ್ಕಟತೆಗಳಂತೆಯೇ ಇನ್ನೊಂದು ಮಹತ್ವದ ವಿಷಯವೂ ಅಡಗಿದೆ. ನನ್ನ ಸ್ವಂತದ ವಿಮರ್ಶಕ ದೃಷ್ಟಿಯಲ್ಲಿ ಸ್ವಾನುಭವದ ಅಭಿವ್ಯಕ್ತಿ ಯಾವಾಗಲೂ ಬರಪೂರ್ಣವಾಗಿದೆ. ಚಿತ್ತಾಲರ ಕಾವ್ಯವಿಮರ್ಶೆಯ ಸಂದರ್ಭದಲ್ಲಿ ನಾನು ಹಿಂದೆ ಹೇಳಿದ್ದ ಮಾತು ಇಂದಿಗೂ ನನಗೆ ಒಪ್ಪಿಗೆಯಾದದ್ದೇ. 'ಭಾವಕ್ಕೆ ಕವಿಯಿಂದ ಬಿಡುಗಡೆ ದೊರೆತಾಗಲೇ ಅದು ತನ್ನ ಸ್ವಂತದ ಶ್ವಾಸೋಚ್ಛ್ವಾಸದ ಬಲದಿಂದ ಜೀವಿಸತೊಡಗುತ್ತದೆ. ಅದಕ್ಕೆ ಸ್ವತಂತ್ರವಾಗಿ ಓದುಗರಿಗೆ ಅನುಭವವನ್ನು ನೀಡುವ ಬಲ ಬರುತ್ತದೆ.' ಮೇಲೆ ಉದಾಹರಿಸಿರುವ ಎರಡನೆಯ ಕಾವ್ಯಭಾಗದಲ್ಲಿ ಚಿತ್ತಾಲರ ಕಾವ್ಯಪ್ರಯತ್ನ ಅಂಥದೆಂಬುದನ್ನು ನೋಡಬಹುದು. ಬೇನೆಯ ಅನುಭವ ಕಾಮದ ಅನುಭವಕ್ಕಿಂತ ಮನುಷ್ಯನ ಮನಸ್ಸನ್ನು ಹೆಚ್ಚಾಗಿ ಆವರಿಸಬಲ್ಲದು. ಆದರೂ ಚಿತ್ತಾಲರ ಅನುಭವಕ್ಕೆ ಕಲೆಯಲ್ಲಿ ಅಭಿವ್ಯಕ್ತಿಗೊಳ್ಳುವ ಆಸೆ ದುರ್ದಮ್ಯವಾಗಿದೆ. ಈ ಕಾವ್ಯಭಾಗದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

'ಅರ್ಥ', 'ಅನರ್ಥ', 'ಅರ್ಥಹೀನ', 'ಸಮರ್ಥ' ಈ ಶಬ್ದಗಳ ಯೋಜನೆಯಲ್ಲಿ ಎಂಥ ಕಲಾತ್ಮಕತೆ ಅಡಗಿದೆಯೆಂಬುದನ್ನೂ ಹೆಚ್ಚು ವಿವರಿಸುವ ಅಗತ್ಯವಿಲ್ಲ. 'ಅರ್ಥ' ಎನ್ನುವ ಶಬ್ದ ಜೀವನ ಮತ್ತು ಕಾವ್ಯ ಇವೆರಡನ್ನೂ ಒಂದಾಗಿ ಬೆಸೆಯುತ್ತದೆ ಮತ್ತು ಹಾಗೆ ಬೆಸೆಯುವ ಕ್ರಿಯೆಯ ಮೂಲಕವಾಗಿ ಚಿತ್ತಾಲರ ಕಾವ್ಯದೃಷ್ಟಿ ಯಾವದೆಂಬದನ್ನೂ ಸೂಚಿಸುತ್ತದೆ. ಚಿತ್ತಾಲರ ಕಾವ್ಯನೀತಿ ಅನುಭವ ಮತ್ತು ಅಭಿವ್ಯಕ್ತಿ ಇವೆರಡರ ಪಾವಿತ್ರ್ಯವನ್ನು ಸಮನಾಗಿ ಕಾಯ್ದುಕೊಂಡು ಬಂದಿದೆ.

ಅದೇ ಕಾರಣಕ್ಕಾಗಿ ಚಿತ್ತಾಲರ ಕಾವ್ಯ ಕೇವಲ ಸಂವೇದನೆಯ ನೇರವಾದ ಅಭಿವ್ಯಕ್ತಿಯಾಗದೆ ಅನುಭವದ ಅರ್ಥಪೂರ್ಣತೆಯನ್ನು ಪ್ರಕಟಿಸುತ್ತದೆ. ಇನ್ನೊಂದು ಚಿಕ್ಕ ಉದಾಹರಣೆಯನ್ನು ನೋಡಬಹುದು :

ಕನಸಿನಲ್ಲೂ ಎಣಿಸಿರಲಿಲ್ಲ
ಹಿಂದೊಮ್ಮೆ ತಂದೆಯನ್ನು ಬಾಧಿಸಿದ ದುಃಖ
ಇಂದು ಮಗನನ್ನೂ ವ್ಯಾಧಿಸೀತೆಂದು.
ಚರಿತ್ರೆಯೆಂದು ಹಾಡಿದ ಗೀತೆ
ಆತ್ಮಚರಿತ್ರೆಯಾಗಿ ವೇಧಿಸೀತೆಂದು.

ಅಭಿವ್ಯಕ್ತಿ ಎಂದರೆ ಅನುಭವದ ವಿಸ್ತರಣ ಎಂದು ಪ್ರಾಮಾಣಿಕವಾಗಿ ನಂಬಿದ ಕವಿ ಗಂಗಾಧರ ಚಿತ್ತಾಲರು. 'ದುಃಖಿಗೀತ', 'ಹರಿವ ನೀರಿದು' ಮೊದಲಾದ ಕವಿತೆಗಳಲ್ಲಿ ದುಃಖದ ಅನುವಂಶಿಕತೆಯನ್ನು ಸಶಕ್ತವಾಗಿ ಅವರು ಪ್ರಕಟಿಸಿದ್ದರು. 'ದುಃಖಿಗೀತ'ದಲ್ಲಿ ತಂದೆಯ ವ್ಯಾಧಿಯನ್ನೂ ಅದರ ಘೋರ ಪರಿಣಾಮವನ್ನೂ ವರ್ಣಿಸಿದ್ದ ಅವರು ಅಲ್ಲಿ ದುಃಖದ ತಾತ್ವಿಕತೆಯನ್ನು ಮನಗಂಡಿದ್ದರು, ಮನಗಾಣಿಸಿದ್ದರು. ಆದರೆ ಆ ತಾತ್ವಿಕತೆಯ ನಿಯತಿ ಇಲ್ಲಿ ಪ್ರತ್ಯಕ್ಷವಾಗಿದೆ. ಇಲ್ಲಿ ಅತ್ಯಂತ ಮಹತ್ವದ ಮಾತೆಂದರೆ ಆ ನಿಯತಿಯನ್ನು ಒಪ್ಪಿಕೊಳ್ಳುವ ಪ್ರಚಂಡವಾದ ಧೈರ್ಯ. ಅದರ ಜೊತೆಗೆ ಈ ಅನುಭವಕ್ಕೆ ಕಲಾತ್ಮಕವಾದ ಅಭಿವ್ಯಕ್ತಿಯನ್ನು ನೀಡುವಾಗ ಬೇಸರವಿಲ್ಲದ ದುಡಿತ, ಕುಶಲ ಕರ್ಮ, ಚರಿತ್ರೆ ಆತ್ಮಚರಿತ್ರೆಯಾಗುವ ಪ್ರಕ್ರಿಯೆಯನ್ನು ಉಚಿತವಾದ ಶಬ್ದಗಳ ಮೂಲಕ ನಿರೂಪಿಸುವ ಕೌಶಲ್ಯ ಕಾವ್ಯದ ಇತಿಹಾಸದಲ್ಲಿ ಅಪರೂಪವಾದ ಮೌಲ್ಯವಾಗಿದೆ.

CC-O. In Public Domain. Digitized by eGangotri

ಕಾವ್ಯಕರ್ಮ ಮೊದಲಿನಿಂದಲೂ ಗಂಗಾಧರ ಚಿತ್ತಾಲರಿಗೆ ಒಂದು ಧೀರೋದಾತ್ತವಾದ ಕ್ರಿಯೆಯಾಗಿದೆ. ನಾವು ಚಿಕ್ಕವರಾಗಿದ್ದಾಗ ಉತ್ತರ ಕರ್ನಾಟಕದ ಎಲ್ಲ ಎಳೆಯರಿಗೆ ಆದರ್ಶ ವ್ಯಕ್ತಿಯಾಗಿದ್ದ ಗಂಗಾಧರ ಚಿತ್ತಾಲರು ಇಂದಿಗೂ ಅದೇ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬಂದಿರುವದೇ ಒಂದು ಆಚ್ಚರಿಯ ಮಾತಾಗಿದೆ. ಅವರು ದೊಡ್ಡ ರೀತಿಯಲ್ಲಿ ಯೋಚಿಸಿದರು, ಅನುಭವಿಸಿದರು, ಬದುಕಿದರು, ಮತ್ತು ಅದನ್ನೆಲ್ಲ ಅಷ್ಟೇ ದೊಡ್ಡ ರೀತಿಯಲ್ಲಿ ನಿರೂಪಿಸಿದರು. ಅದರಿಂದಾಗಿ ಹೊಸಗನ್ನಡ ಕಾವ್ಯದಲ್ಲಿ ಅವರದು ಎತ್ತರದ ದನಿಯಾಗಿದೆ. ಧೀರೋದಾತ್ತತೆಯೇ ಅವರ ಕಾವ್ಯದ ಸಮಗ್ರ ಲಕ್ಷಣವಾಗಿದೆ.

ವಲ್ಲಭ ವಿದ್ಯಾನಗರ
೧೧-೧೨-೧೯೮೨

ಕೀರ್ತಿನಾಥ ಕುರ್ತಕೋಟಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಮಾತು

'ಪಾರ್ಕಿನ್ಸನ್ ಡಿಸೀಜ್'—ಹೆಸರು ಕೇಳಿದರೇ ಅವಸಾನ ಹಾರಬೇಕು, ಅಂಥ ವ್ಯಾಧಿ. ಇದರ ಹೆಡೆಯಡಿಗೆ ಕಳೆದ ಹಲವಾರು ವರ್ಷ ದಿನ ಕಳೆಯುತ್ತಿದ್ದೇನೆ. ಪರಿಣಾಮವಾಗಿ ಇಲ್ಲಿಯ ಬಹು ಸಂಖ್ಯ ಕವನಗಳ ಮೇಲೆ ಅದರ ದಟ್ಟ ಛಾಯೆ ಬಿದ್ದರೆ ಆಶ್ಚರ್ಯವೇನಿಲ್ಲ. ಅದೇ ಕಾರಣಕ್ಕಾಗಿ ಪ್ರಸ್ತುತ ಸಂಗ್ರಹದ ಗಾತ್ರವೂ ಸಣ್ಣದಾಗಿದೆ. ಉಪಾಯವಿಲ್ಲ.

ನಾನು ಈವರೆಗೆ ಪ್ರಕಟಿಸಿದ ಸಂಗ್ರಹಗಳ ಸಂಖ್ಯೆ ದೊಡ್ಡದಲ್ಲ. ಈ ಮೊದಲಿನ ಸಂಗ್ರಹ ('ಹರಿವ ನೀರಿದು') ಬೆಳಕು ಕಂಡದ್ದು ೧೯೭೦ರಲ್ಲಿ. ಕಳೆದ ಹನ್ನೆರಡು ವರ್ಷಗಳ ಅವಧಿಯಲ್ಲಿ, ಎಷ್ಟೋ ಸಲ, 'ಇನ್ನು ಮುಂದೆ ಬರೆಯಲಾರೆ' ಎಂದು ನಿರಾಸೆ ಪಟ್ಟಿದ್ದುಂಟು. ವರ್ಷಗಟ್ಟಲೆ ಕಾಲವನ್ನು ಏನೂ ಬರೆಯದೆ ಉಸಿರುಗಟ್ಟಿದ ಸ್ಥಿತಿಯಲ್ಲಿ ಕಳೆದು, ಕಳೆದ ಕೆಲವು ತಿಂಗಳಲ್ಲೇ ಒಮ್ಮೆಗೆಲೇ ಬಾಯಿ ತೆರೆದಂತೆ ಕೆಲವು ಕವನಗಳನ್ನು ಬರೆಯಲು ಸಾಧ್ಯವಾಯಿತು. ಒಂದು ತರದ ಆತ್ಮವಿಶ್ವಾಸ ಮೂಡಿಬಂತು. ಈ ಹೊಸ ಹುಮ್ಮಸ್ಸು ಈ ಸಂಗ್ರಹದ ಪ್ರಕಟಣೆಗೆ ಕಾರಣವಾಗಿದೆ.

ಸಂಗ್ರಹದ ಪ್ರಕಟಣೆಯ ಹೊಣೆಯನ್ನು ಆತ್ಮೀಯರಾದ ಡಾ.ಹಾ.ಮಾ. ನಾಯಕರು ವಹಿಸಿದ್ದಾರೆ. ನಮ್ಮ ಪ್ರಪ್ರಥಮ ಭೇಟಿಯಲ್ಲೇ ಅಪರೂಪವಾದ ಸೌಹಾರ್ದ ಭಾವವನ್ನು ಪ್ರಕಟಿಸಿದ ಅವರು ಈ ಸಂಗ್ರಹ ಬೇಗ ಬೆಳಕು ಕಾಣಲು ನೆರವಾಗಿದ್ದಾರೆ. ಗೆಳೆಯರಾದ ಖ್ಯಾತ ವಿಮರ್ಶಕ ಶ್ರೀ ಕೀರ್ತಿನಾಥ ಕುರ್ತಕೋಟಿ ಈ ಸಂಗ್ರಹಕ್ಕೆ ಮುನ್ನುಡಿ ಬರೆದು ನನ್ನನ್ನು ಉಪಕೃತನನ್ನಾಗಿ ಮಾಡಿದ್ದಾರೆ. ಅಲ್ಲಿ ಅವರು ಅಂದ ಪ್ರಶಂಸೆಯ ಮಾತುಗಳಿಗೆ ನಾನು ಎಷ್ಟು ಅರ್ಹ ಎಂಬುದನ್ನು ಕಾಲವೇ ನಿರ್ಧರಿಸಬೇಕು. ನನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಯಶವಂತ ನನ್ನ ಬೆಂಬಲಕ್ಕೆ ನಿಂತು ಈ ಸಂಗ್ರಹದ ಹಸ್ತಪ್ರತಿಯನ್ನು ಸಿದ್ಧಗೊಳಿಸಿ ತನ್ನ ಭ್ರಾತೃಪ್ರೇಮವನ್ನು ಪ್ರಕಟಿಸಿದ್ದಾನೆ. ಈ ಮೂವರಿಗೂ ನನ್ನ ಕಳಕಳಿಯ ಕೃತಜ್ಞತೆಗಳು.

ಇಲ್ಲಿಯ ಹಲವು ಕವನಗಳನ್ನು ಮೊದಲ ಬಾರಿಗೆ ಪ್ರಕಟಿಸಿದ 'ಸಾಕ್ಷಿ', 'ಸಂಕ್ರಮಣ', 'ಪ್ರಜಾಮತ', 'ಪ್ರಜಾವಾಣಿ', 'ಇಂಚರ' ಈ ಪತ್ರಿಕೆಗಳ ಸಂಪಾದಕ ಮಿತ್ರರಿಗೂ ನನ್ನ ಕೃತಜ್ಞತೆಯ ವಂದನೆಗಳು. ಈ ಸಂಕಲನವನ್ನು ಪ್ರಕಟಿಸುತ್ತಿರುವ ಐಬಿಎಚ್ ಪ್ರಕಾಶನದ ಮಿತ್ರರನ್ನು ನಾನು ವಿಶೇಷವಾಗಿ ಸ್ಮರಿಸುತ್ತೇನೆ.

ಗಂಗಾಧರ ಚಿತ್ತಾಲ

೨, ಜನೇವರಿ ೧೯೮೩

C–7, Hemhorizon
Jeevan Bimanagar
Borivli (w)
Bombay–400 092.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಕ್ರಮಣಿಕೆ

ಕಾವ್ಯೋದ್ಯೋಗ	15
ಸಂಪರ್ಕ	17
ಒಡಕು	19
ಹಾಲು	21
ಆಧಾರ	23
ಗೂಢ	24
ಆಘಾತ	25
ಗುಲ್‌ಮೊಹರ್	27
ಉದ್ವಿಗ್ನ	29
ವ್ಯಾಧಿ	30
ಕನಸಿನಲ್ಲೂ ಎಣಿಸಿರಲಿಲ್ಲ	34
ಒಳಸಂಚು	35
ಭೀತಿ – ೧	36
ಭೀತಿ – ೨	37
ಲಕ್ಷಣಗಳು	38
ಹಿಂಸ್ರಪಶು	39
ಬೇಡಿಕೆ	40
ಕೃಷಿ	41

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವ್ಯೋದ್ಯೋಗ

ಕೊಂಕು ಮಾತು, ಕಿಲಾಡಿ ನುಡಿ.
ನಾಲಗೆಯ ಚಾಪಲ್ಯ ತುರಿಕೆ ತೀರಿಸಲೆಂದೆ
ಪುಟದುದ್ದ ಚತುರೋಕ್ತಿ ಚಾಕಚಕ್ಯ.
ಹೆಜ್ಜೆ ಹೆಜ್ಜೆಗು ಅಣಕ, ಮೂದಲಿಕೆ, ತುಂಟತನ,
ಹಗಲಿಡೀ ಬಾಯ್ತುಂಬ ಬರಿಯ ವ್ಯಂಗ್ಯ.

ಈ ಇಷ್ಟೆ ಬಂಡವಲ ಮೇಲೆ ಹೂಡಿಪೆ, ಗೆಳೆಯ,
ನಿನ್ನ ಕಾವ್ಯೋದ್ಯೋಗ ; ಯಾವುದಕೂ ಸಲ್ಲ :
ಒಳ್ಳೆ ಚುರುಕಾಗಿ ಚಲಾಖ್ಪಾಗಿ ಬರಿ ಮಾತುಗಳ
ಉರುಳಿಸಿದರೇ ಮಹತ್ಕೃತಿಯು ಆಲ್ಲ.

ಬೇಕು ಒಳ ಹೊರಗ ಕೇಂದ್ರದಲ್ಲಿ ಹಿಡಿಯುವ ಕಣ್ಣು,
ಇಡಿಯಾಗಿ ಬದುಕನೀಕ್ಷಿಸುವ ನೋಟ.
ನೆಲಬಾನ ಎಳೆತ–ಸೆಳೆತಗಳ ತುಮುಲ ದ್ವಂದ್ವ
ರೂಪಿಸುವ ಜೀವಿತದ ಆಟ–ಓಟ.

ನಿರೂಪಿಸಲು ಬೇಕು ಬೇರೆ ಥರ ತಾಖಿತ್ತು
ಬೇರೆ ಥರ ತಾಲೀಮು ಪಡೆದ ಉಸಿರು
ದಿನ ನಿತ್ಯ ಧ್ಯಾನಧಾರಣೆಯು ನೀಡುವ ತ್ರಾಣ,
ಸೂಕ್ಷ್ಮಾತಿಸೂಕ್ಷ್ಮ ಬಿಡಿಸಿಡುವ ಕುಸುರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕು ನಾಲ್ಕೂ ದೆಸೆಗೆ ಬಿಂಬ ಚುಂಬಕ ಮನಸು
ಜೀವಜಾತಗಳ ನಾಡಿ ಸ್ಪಂದನ
ಪಡಿಮೂಡಿಸಲು ಬೇಕು ತಕ್ಕ ಪ್ರಾಣದ ಹಿಡಿತ –
ಮಿಡಿತ–ತುಡಿತದ ತೀವ್ರ ಸಂವೇದನ.

ಯಥಾರ್ಥ ಮಾತುಗಳ ಪರಿಪಾಕವೇ ಬೇಕು
ಕೃತಾರ್ಥವೆನೆ ಅಂತರಂಗವ ನುಡಿಸಲು.
ಬರಿಯ ಆರ್ಭಟ, ಆಟಾಟೋಪ, ಆಕ್ರೋಶಗಳ
ದುಂದುಗಾರಿಕೆ ಶುದ್ಧ ಗೌಜು–ಗುಲ್ಲು.

ಔಚಿತ್ಯಪೂರ್ಣ ಪದ–ಪಂಕ್ತಿಗಳೆ ಮೊಳಗಿಸಲಿ
ಜೀವದಾಳದ ಕನಸು–ನೆನಸಿಕೆಗಳ,
ನಿಮಿಷವೂ ಬಿಡದೆ ನಮ್ಮನಿಲ್ಲಿ ತೊಡಗಿಸಿದ ಈ
ಬದುಕ ಗೂಢಗಳ, ಭೀಕರತೆ–ರಮ್ಯತೆಗಳ.

CC-O. In Public Domain. Digitized by eGangotri

ಸಂಪರ್ಕ

ಕಳೆದ ವಾರ, ಕುಣಿಯುತ್ತಲೇ ಬಂದಳು ನಮ್ಮ ಸರಿತೆ !
ಸಾಲೆಯಲ್ಲಿ ಹೇಳಿದರಂತೆ
'ಒಂದಿಷ್ಟು ಗೋಧಿ, ಒಂದಿಷ್ಟು ಜೋಳ, ಭತ್ತ,
ಹೀಗೆಯೇ ಮತ್ತೇನೇನೊ
ಮನೆಯಲ್ಲೇ ನೆಟ್ಟು ಸಸಿ ಬೆಳೆಸಿ ತರಬೇಕು.'

ಸರಿ, ಶುರುವಾಯ್ತು ಮಕ್ಕಳೋಡಾಟ, ಲಗುಬಗೆ, ಗಲಭೆ
ನಾವಿರುವ ಐದನೇ ಮಜಲಿನೆತ್ತರದಲ್ಲಿ ಭರದ ಬಿತ್ತನೆ ಕೆಲಸ !

ಮೋಜಿನಿಸಿ ನೋಡುತ್ತ ಕುಳಿತೆ –
ಹೊಲಗದ್ದೆ ಕಾಣದೀ ಮರಿ - ಕೃಷೀವಲರೆಲ್ಲ
ಖಾಲಿ ಟಿನ್ನುಗಳಲ್ಲಿ ಬೀದಿ ಧೂಳನು ತಂದು ಪಾತಿ ಕಟ್ಟಿ,
ಸುಕ್ಕಿದೊಣಕಲು ಬೀಜವಿಷ್ಟು ಹೂಳಿ,
ಬಾಟ್ಲಿ ನೀರಿನಲೆ ಪರ್ಜನ್ಯ ಸುರಿಸಿ,
ಕೃತಕೃತ್ಯರಂತೆ ಸುಗ್ಗಿ ಕನಸ ಕಾಣುತ ನಿಂತ ಮುಗ್ಧರೀವಿ!
ಐದಾರು ದಿನ, ಬೆಳಗ್ಗೆ ಎದ್ದು ಕೂತರು
ಯಾವ ಸುದ್ದಿ ಸುಳಿವೂ ಇಲ್ಲ ಮೊದ್ದು ಮಣ್ಣಲ್ಲಿ.

ಮೊನ್ನೆ ಮಾತ್ರ,
ಒಂದೆರಡು ಕಣ ಅಲ್ಲಿ ಇಲ್ಲಿ ಅಲುಗಿದ ಕುರುಹು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನೆಯೋ
ಒಳಗಿನೊಳಗೇ ಏನೊ
ಮೈಮುರಿದು ನಿದ್ದೆ ತಿಳಿದೇಳ್ವ ಥರ.

ಇಂದೊ –
ಕಣ್ಣಮುಂದೇ ತೆರೆದ ಅದ್ಭುತೋದ್ಭವ ಪ್ರಹರ ! –
ಚಿಣ್ಣರೊಲು ದೂಡಿ ಕೊಂಬೂದಿ ಹಣಿಕಿಕ್ಕಿ
ಇಣಿಕಿವೆ ಸುತ್ತ ನೂರಾರು ಅಂಕುರ !

ನೀರ್ಮಣ್ಣ ಆರೈಕೆಗೆದ್ದ ಆಗಂತುಕರ
ಈ ಸೋಜಿಗದ ಸುತ್ತ ನೆರೆದ ಮಕ್ಕಳ ಮಧ್ಯೆ
ಸೇರಿ ನಾನೂ ಕುಳಿತೆ, ಮೈಮರೆತೆ ಮಗುವಾಗಿ.

ನಿಯಾಳಿಸುತ ಕುಳಿತೆ
ಮುದ್ದಾದ ಮೊಳಕೆಗಳ ಹಸುಳೆ ಮಿದು ನಯ ನುಣುಪ.
ತೊರೆಯೆ ಅಕ್ಕರೆಯೊರತೆ
ಹತ್ತಿರಕೆ ಬಾಗಿದೆ. ತಟ್ಟಿ ಬೆರಳಾಡಿಸಿದೆ. ಖುಶಿಪಟ್ಟೆ.

ಕುತೂಹಲದಿಂದ
ಬದಿಯ ಮಣ್ಣನ್ನಿಷ್ಟು ಸರಿಸಿ ನೋಡಿದೆ –
ಹಿಗ್ಗಿ ದುಂಡಗೆ ಗಬ್ಬವಾಗಿ ಬಿರಿದಿವೆ ಬೀಜ:
ಕೆಳಕ್ಕೆ ಬಾಯೂರಿದಲ್ಲಿ ಇಳಿಸಿವೆ ಬೇರು–ಸೂಜಿಮೊನೆ ಐದಾರು.
ಒಡಲು ಬಿರಿದಲ್ಲಿ ಮೇಲಕ್ಕೆ ಕಳಿಸಿವೆ ದೇಟು –
ಸಸಿಯ ಮೂಲಸ್ತಂಭ !
ಖಾಲಿ ಟಿನ್ನುಗಳ ಬೀದಿ ಧೂಳಲ್ಲು ಮೈತಳೆದ
ಸೃಜನದೀ ಕೌತುಕವ
ನಿಯಾಳಿಸುತ ಕುಳಿತೆ, ಸೋಕಿ–ಸೋಕಿ–ಬೆರಳಾಡಿಸಿದೆ.
ಉರದಲುಮ್ಮಳ, ಮತ್ತೆ ಮತ್ತೆ ಜೀಕಳಿ ಪುಳಕ
ಇಷ್ಟು ಹತ್ತಿರದ ಜೀವ ಸೃಷ್ಟಿ ಸಂಪರ್ಕಕ್ಕೆ !

CC-O. In Public Domain. Digitized by eGangotri

ಒಡಕು

ಜಗಜ್ಜಾಹೀರವಾಗಿ ಸುದ್ದಿ ಬಂದಿತ್ತು
ದಪ್ಪಕ್ಷರದ ಸುದ್ದಿ :
ಯಾವದೋ ಉಸುಬಿನ ಆರಣ್ಯಕ್ಕೆ
ಅಣುವನ್ನೊಯ್ದು ಜಜ್ಜಿ ಒಡೆದರಂತೆ
ಮೈಲಿದೂರ ಮೈ ಕದ್ದು ನಿಂತವರು ನೋಡಿದರಂತೆ.

ಮೊದಲು ಜಿಗಿದದ್ದು ಭುಗಿಲೆದ್ದ ಜ್ವಾಲೆಯಗೋಲ
ನೂರು ಸೂರ್ಯರ ಜರೆವ ವಿಸ್ಫುಲಿಂಗ
ಆ ಮೇಲೆ ಆಕಾಶ ಮುತ್ತಿ ಹೆಡೆ ಬಿಚ್ಚಿದ
ಭಯಾಕಾರ ರೇಣು ಭಸ್ಮದ ಆಣಬೆ.
ಆ ಮೇಲೆ ತೆರೆ ಮೇಲೆ ತೆರೆ ಬಡಿದು
ಸಿಡಿಮಿಡಿದ ನೆಲದದುರು.
ಕೊನೆಗೊಮ್ಮೆ ಗರ್ಜನೆಯೊ, ಚೀತ್ಕಾರವೋ
ವಿಕಾರ ಕೂಗೊ, ತಿಳಿಯದ ದೇಹ ಜೀವಭೇದಕ ನಾದ.

ಇನ್ನೂ ಏನೇನೋ ಗಳುಹಿತ್ತು ಸುದ್ದಿ :
ಈ ಯಶಸ್ವೀ ಒಡಕಿನಿಂದ ಹೊರಬಿದ್ದ ಬಲವೆಷ್ಟು,
ಒಳ ಸುರಿದ ಶ್ರಮವೆಷ್ಟು, ಖರ್ಚೆಷ್ಟು.
ಈ ಮಹತ್ಸಾಧನೆಯ ಮಂತ್ರಬೋಧಕನ್ಯಾರು, ತಂತ್ರ
ಶೋಧಕನ್ಯಾರು, ಏನವರ ವರ್ಚಸ್ಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಐತಿಹಾಸಕದ ಸಾಧಕದ ಬಾಧಕದ ಒಂದಿಷ್ಟು ತಪಶೀಲು
ಮಾನವನ ನಡೆಯಲ್ಲಿ ಇದು ಎಷ್ಟನೆ ಮೈಲಿಗಲ್ಲು
ಮುಂದಿನ ಕಲ್ಲು.
ಬೀಳುವ ಸರಾಸರಿಯ ತಾರೀಖಿನಂದಾಜು
ಬರುವ ನಾಳೆಗಳಲ್ಲಿ ಏನೆಲ್ಲ ಕಾದಿದೆಯೊ ಅದರ ಜಾತಕ ಗಣಿತ
ಒಡಕಿನ ಪರಂಪರೆಯ ಚಾಚೂಬಿಡದ ಭಣಿತ
ಅಂಕಿ ಸಂಖ್ಯೆಯ ಸಕಲ ವಿವರ ಸಹಿತ.

ಓದೋದುತಿರುವಾಗ ನನಗೇತಕೋ ನಡುಕ.
ಇದು ಒಳಿತಿಗಲ್ಲ, ನೆಲಗಟ್ಟನೇ ಜಡಿದೊಡೆದು
ಅಡಿಗಲ್ಲಿನೊಳಗುಟ್ಟಿನೊಳಕು ಬೆದಕುವ ಚಾಳಿ
ಕೆದಕಿ ಆರಸುವ ಖಿಚ್ಚಿ ತುರಿಕೆ ಕಳೆವುದರಲ್ಲಿ
ಕುರುಡು ಕೈಗಳು ದುಡುಕಿ–ನಿಯತಿಯುರಕೂ ದಾಳಿ
ಈ ಜ್ವಾಲೆ, ಈ ಭಸ್ಮ, ಈ ಕೂಗು, ಈ ಕಂಪ
ವಿದ್ರೋಹಕುರಿದೆದ್ದ ವಿಲಯ ರುದ್ರರ ಹೂಲಿ.

CC-O. In Public Domain. Digitized by eGangotri

ಹಾಲು

ಆಕಾಶದಿಬ್ಬನಿಗೆ ನೆಲವ ನೆನೆಯಲು ಬಿಟ್ಟು,
ಹಸರಾಣಿ ಬೀಜಗಳ ಹವೆಯಲ್ಲಿ ತೂರಿಟ್ಟು,
ಹಸೀಹಸೀ ಹಸಿರಾಗಿ ಹುಲ್ಲುಗಾವಲ ಬೆಳೆಸು.

ಗೋದಲೆಗಳಲ್ಲಿ ಸಾಲುಕಟ್ಟಿ ಹಸುಗಳ ಹಿಂಡು
ಕೊರಳಿಗೊಂದೊಂದು ಇನಿದನಿಯ ಗಂಟೆಯಕೊಂಡು
ಹಗಲಿಡೀ ಹಸಿರಿನೆಳೆಗರಿಕೆ ಮೇಯಲು ಕಳಿಸು.

ಮಳೆ ಗಾಳಿ ಬಿಸಿಲ ಹಿತವಾದ ಆರೋಗಣೆಗೆ ಮೈತುಂಬುವವು ಅವು.
ಬೆದೆಯುವವು, ಈಯುವವು, ಕೆಚ್ಚಲು ಗುಮ್ಮೆ ತೊರೆಯುವವು
ಬೆಂದೊಡಲ ತಣಿಸೆ ಧಾರೆಗರೆವ ಹಾಲೋಹಾಲು !

ಇದು ಕನಸೆ
ನೆಮ್ಮದಿಯ ಈ ಇಂಥ ಕ್ಷೀರಪಥವೂ ಕನಸೆ
ನಮ್ಮ ಈ ಹತವೀರ್ಯ ಶತಮಾನದಲ್ಲಿ ?
ದಿನವು ನಡೆದಿದೆಯಲ್ಲ ಕೊಲ್ಲು ಕೊಲ್ಲು ಕೊಲ್ಲು
ಈ ನಿರಂತರ ಹತಿಗೆ ತಡೆಯೆಂತು, ಕೊನೆಯಲ್ಲಿ ?

ನಿನ್ನೆ ಹೀರೋಶಿಮಾ ಕ್ಷಣಾರ್ಧದಲಿ ಹೋಮ.
ಇಂದು ವಿಯತ್ನಾಮಿನಗ್ನಿಕುಂಡ.
ನಾಳೆ ಮತ್ತೆಲ್ಲೊ ಭಗ್ಗನೆ ಹೊತ್ತಿಕೊಳ್ಳುವ ಹತ್ಯಾಕಾಂಡ
ಆಹುತಿಯನಿತ್ತಷ್ಟು ಹಸಿವ ಕೆಂಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಡಕಂಡಲ್ಲಿ ಇಬ್ಬಣದ ಉಬ್ಬರ ವೈರ
ಹಗೆಯ ಹೊಗೆಯಾಡಿಸುವ ಹೊಂಚುಗಣ್ಣು.
ಗುಡ್ಡದೊಲು ಬೆಳೆದ ಇಬ್ಬದಿಯ ಆಯುಧಭಾರ
ಕಿಡಿ ಹಾರೆ ಇಬ್ಬಣವು ಬೂದಿ ಮಣ್ಣು.

ಈ ವೈರತಪ್ತ ಲೋಕಕ್ಕೆ ಕೊನೆಗೂ ಸಿಗದೆ
ಹಾಲಿನುಪಚಾರ, ಹಾಲಿನದೆ ಲೇಪ ?
ಕೆಡವಿ ನೆಲಸಮಗೊಳಿಸಿ ಅಸ್ತ್ರಶಸ್ತ್ರಾಗಾರ
ಹಸಿಹಸೀ ಹುಲ್ಲ ಬೆಳೆಯುವುದೊಂದೆ ಕಾಯಕ.

ದಂಡೆತ್ತಿ ಬರಲಿ ಹುಲ್ಲಿನ ಹಸಿರು ಸಾಮ್ರಾಜ್ಯ
ದಂಡೆತ್ತಿ ತೊರೆವ ಕೆಚ್ಚಲುಗಳ ಹಿಂಡು.
ದಂಡೆತ್ತಿ ಹಾಲು ಹೊನಲಾಗಿ ತಬ್ಬುತ ಬರಲಿ
ಸಮರಾಗ್ನಿ ನಂದಿಸಲಿ ಕ್ಷೀರಸಿಂಧು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಧಾರ

ತಲೆಯ ಮೇಲೇ ಸದಾ ಬಾಗಿ ನಿಂತಿದೆಯಲ್ಲ ಆಕಾಶದೀ ಶಿಖರ,
ಕೇಳಿದ್ದೆ ಇದಕುಂಟು
ಅಷ್ಟದಿಗ್ಗಜ ಹೊತ್ತ ಜಂತೆ-ತೊಲೆಯಾಧಾರ.

ಒಂದು ದಿನ ಇದ್ದಕಿದ್ದಂತೆ ಕೈಮೈ ನಡುಗಿ ತತ್ತರಿಸೆ ಗೊತ್ತಾಯ್ತು:
ಇಲ್ಲದಿರೆ ದೇಹಯಷ್ಟಿಗೆ ಸೆಟೆವ, ಸುಟಿಯಾಗಿ ಪುಟಿವ ಪುಷ್ಪಿಯ ಗತ್ತು,
ಆಕಾಶವೂ ಕೂಡ ತಲೆಕಳಚಿ ಆದೀತು
ಹೊರಲು ಬಾರದ ಭಾರ.

ಕಾಲಕೆಳಗೇ ಸದಾ ಎತ್ತಿ ಹಿಡಿದಿದೆಯಲ್ಲ ಗಟ್ಟಿನೆಲವೆಲ್ಲೆಲ್ಲು,
ಕೇಳಿದ್ದೆ ಇದಕುಂಟು
ಆದಿಶೇಷನು ಕೊಟ್ಟ ಸಹಸ್ರ ಹೆಡೆಗಳ ತೋಲು
ಒಂದು ದಿನ ಇದ್ದಕಿದ್ದಂತೆ ಕಾಲ್ಬಲವುಡುಗಿ ತಡಬಡಿಸೆ ಗೊತ್ತಾಯ್ತು;
ಇಲ್ಲದಿರೆ ಆಡಿಗಳಿಗೆ ಮೆಟ್ಟಿನಿಲ್ಲುವ, ಒತ್ತಿನಡೆವ ಸ್ಥಿರ ತಾಕತ್ತು,
ನಿಂತ ನೆಲವೂ ಕೂಡ ಮುಗ್ಗರಿಸಿ ಆದೀತು
ಕುಸಿವ ಉಸುಕಿನ ಹುದಲು.

CC-O. In Public Domain. Digitized by eGangotri

ಗೂಢ

ನಿನ್ನೆ ಮೊನ್ನೆಯ ವರೆಗೆ ಎಲ್ಲ ಸುಲಭ ಸಲೀಸು
ಸೈಕಲ್ ಸ್ವಚ್ಛಂದ ಗತಿ, ಹೆಜ್ಜೆಹೆಜ್ಜೆಗೆ ಸೊಗಸು
ಮನ ಬಂದ ಕಡೆ ತಿರುಗಿ ತುಡಿದ ಅಶ್ವಾರೋಹಿ
ಸಡಗರದ ನಡಿಗೆ ಗತ್ತಿನಲಿ ಮೈಮರೆತಿದ್ದ
ತಾನು ಯಾರೆಂಬರಿವ.

ಇಂದು ತತ್ತರಿಸಿ ಮುಗ್ಗರಿಸಿ ಕಂಡಿದ್ದಾನೆ
ಹೊರೆ ಹೊತ್ತ ಮೂಕಪಶು ತಾನೆ, ಸ್ವಾರನು ತಾನೆ.
ಬಡಪಾಯಿ ಕುದುರೆಗೋ ಆವರಿಸುತಿರೆ ಬೇನೆ
ಉತ್ತುಂಗ ಆರೂಢ
ನಾಗಿ ಮೆರೆದವನೀಗ
ಕುಗ್ಗಿ ಆಗಿದ್ದಾನೆ
ತಡವಿ ಎಡವಿ ತಡಕುವ ಎಬಡ
ಗತಿ ಮೂಢ–ಮತಿ ಮೂಢ.

ಆರರೆ ಸುಡುವೀ ಗೂಢ
ಹೊತ್ತು ತೊಳಲುವದೊಂದೆ ಗತಿಯಾಯ್ತೆ ಜೀವನಿಗೆ ?
ಎತ್ತಿ ಹಿಡಿವಂಥಾದ್ದೆ ಕೆಳಗೊತ್ತಿ ಕೆಡವುತಿದೆ.
ಈ ವಿಪತ್ತಿನಲಿ ಮೊರೆಯಿಡಲಾವ ದೇವನಿಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಆಘಾತ

ಸಿಡಿಲಿನಂತೆರಗಿತ್ತು ಹ್ರಾಸಗೈವಾಘಾತ
ಕಣ್ಗೆಲ್ಲ ಕವಿದಿತ್ತು ಕಗ್ಗತ್ತಲೆ
ತ್ರಾಣ ಉಡುಗಿದ ದೇಹ ದೊಪ್ಪೆಂದು ಕುಸಿದಿತ್ತು.
ಆಕಾಶ ಕಳಚಿತ್ತು ತಲೆಯ ಮೇಲೆ.
ಇದುವೆ ಸರಿ ಕೊನೆಯು, ದುಃಸಹ್ಯದ ಪರಾಕಾಷ್ಠೆ
ಇನ್ನಿಲ್ಲ ಹಿಂದೆ ಮುಂದೆ
ಎನ್ನಿಸೆ ಭಯಾಕ್ರಾಂತನಾಗಿ ಆಕ್ರಂದಿಸಿದೆ
'ಕಾವರಿಲ್ಲವೆ ಇಲ್ಲಿ ಯಾರು' ಎಂದೆ.
ಒಂದಿಷ್ಟು ಚಲವಿಚಲಗೊಳದೆ ಪೈ ಮರೆತಿತ್ತು
ಜಗ ತನ್ನ ದಿನದ ವ್ಯವಹಾರದಲ್ಲಿ
ಏನೊಂದನೂ ಅರಿಯದಂತೆ ನಿರ್ದಯವಾಗಿ
ಉರಿದಿದ್ದ ಸೂರ್ಯ, ಅಲೆದಿತ್ತು ಗಾಳಿ.

ದಾರಿಗುಂಟೆಲ್ಲ, ಜನಜಂಗುಳಿಯ ಓಡಾಟ
ಪಾರ್ಕಿನಲಿ ಹಸುಳೆ ಕೇಕೆ.
ಒಬ್ಬೊಬ್ಬಗೊಂದೊಂದು ಥರದ ಭೋಗದ ಸರಕು.
ನನ್ನ ಯಾತನೆ ಗೊಡವೆ ಅವರಿಗೇಕೆ ?
ಇಲ್ಲಿನೀ ನೋವು ನಗೆಗಳ ರೀತಿಯೇ ಈ ಹೀಗೆ :
ಮೂಲೆ ಹಿಡಿದೊಬ್ಬ ನರ ನರಳುತಿರಲು
ಮುದದಿಂದಲಿನ್ನೊಬ್ಬ ಸಿಳ್ಳು ಹಾಕುತ ನಡೆವ
ಕಾಲಡಿಗೆ ನೆಲ ಸಲೀಸು ಉರುಳುತಿರಲು.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರ ಸತ್ತ್ಗಧೀನ ನಮ್ಮ ಜೀವನ ಮಾನ
ದಿನರಾತ್ರಿ ಯೋಚಿಸುತ ಬವಣೆ ಬಟ್ಟೆ.
ಕುಸಿದ ಕಂಬಿಗೆ ತ್ರಾಣ ಮೊಳೆವ ಸುಳಿವೇ ಇಲ್ಲ
ಮುದ್ದೆ ದೇಹದಿ ಮತ್ತೆ ಭಯವು ಹುಟ್ಟೆ,
ನರನಾಡಿಯಲ್ಲಿಳಿದ ನಡುಕ ನಿಲ್ಲದ ಮೊಳಗ –
ದಯ್ಯೊ ಎಲ್ಲೂ ಅಭಯ ಸಾರುವ ಧ್ವನಿ.
ಕೂಗಿಕೊಂಡರು ಮತ್ತೆ ರೇಗಿಕೊಂಡರು ಕೊನೆಗೆ
ಬಂದಪ್ಪಳಿಸುವದು ನನ್ನದೇ ಮಾರ್ದನಿ.

ನೆಲ ಬಾನುಗಳ ನಿರರ್ಥಕದ ತೆಕ್ಕೆಯಲಿಲ್ಲಿ
ಸಿಕ್ಕು ಬಿದ್ದಿದ್ದೇನೆ. ಕೊನೆಯು ಎಂದು
ಮೈದಡವಿ ಮಂಪರಿಸಿ ಮ್ಲಾನಗ್ಲಾನಿಯ ತಂದು
ಎಚ್ಚರವೆ ಬರವ ಸುಖನಿದ್ದೆ ಬಂದು.

CC-O. In Public Domain. Digitized by eGangotri

ಗುಲ್‌ಮೊಹರ್

೧

ಮುವ್ವತ್ತು ವರ್ಷಗಳಿಂದಲೂ ನಿಂತಲ್ಲೇ ನಿಂತಿದೆ
ಗೇಟ ಬಳಿ ಗುಲ್‌ಮೊಹರ್.
ಅದೇ ಒರಟೊರಟು ಕಾಂಡ, ಅದೇ
ರೆಂಬೆಗಳ ಮುರುಕ,
ಅದೇ ಕುಣಿತಕ್ಕೆ ಮೈ ನೀಡಿದಂಥ ತ್ರಿಭಂಗಿ ಬಗೆ
ನೆಲದ ಪೋಷಣೆ ಹುಡುಕಿ
ಆಳಕ್ಕು ಇಳಿದ ಬೇರುಗಳ ಬಿಗಿತ.
ಎಳೆಯನಾಗಿದ್ದಾಗ ಇದರ ಎಲೆಗಳ ಮರೆಗೆ
ಅವಿತು ಕೂತಿರುತ್ತಿದ್ದೆ ಗಂಟೆಗಟ್ಟಲೆ ಕಾಲ.
ಸುತ್ತಲೂ ಹಚ್ಚಹಸಿರಿನ ಬೆಳಕು ಜಿನುಗುವ ವನಸ್ಪತಿ ಛಾಯೆ,
ಎದ್ದಲ್ಲಿ ಕೂತಲ್ಲಿ ತೊಗಟೆ ಮೈ ಸುಖಿಸೋಂಕು
ಕಿವಿಗೊಟ್ಟು ಕೇಳಿದರೆ ನಾಳ ನಾಳಗಳಲ್ಲಿ
ಏರಿಳಿವ ಮೈರಸದ ಸರಭರದ ಸದ್ದು ಸೊಗಸು
ಎಲ್ಲಿ ಕಂಡರೆ ಅಲ್ಲಿ ಕುಡಿಯೊಡೆವ,
ಎಲೆ ಬಿಡುವ, ಹೂ ಹಿಡಿವ ಸಂತತ ನವೀನ ಕ್ರಿಯೆ,
ಬೇಸಗೆಯ ಶಾಖ ಒಂದಿಷ್ಟೆ ತಾಕಿತೆ ಸಾಕು,
ಚಿಮ್ಮುವುದು ವಿಜೃಂಭದಿಂದ ರೆಂಬೆಗಳಲ್ಲಿ ರಂಗಿನೋಕುಳಿ
ಬಂಗಾರಗೆಂಪು ಹೂವುಗಳ ಮಾದಕ ಲಹರಿ !

CC-O. In Public Domain. Digitized by eGangotri

ಏನು ಸಖ್ಯವೊ ಸುಖವೊ ಈ ಹಸುಳೆ ಜೀವಕ್ಕೆ
ಮುಖವಿರದ, ಮಾತಿರದ ಸಸ್ಯದೀ ಜತೆಯಲ್ಲಿ ?

೨

ಮುವ್ವತ್ತು ವರ್ಷಗಳಿಂದಲೂ ನಿಂತಲ್ಲೇ ನಿಂತಿದೆ
ಗುಲ್‌ಮೊಹರ್.
ಚಳಿ, ಗಾಳಿ, ಮಳೆ ಬಿಸಿಲುಗಳ ನಿಯತಕಾಲಿಕಕೆ
ಮೈ ನೀಡಿ ನಿಮಿರುತ್ತ.
ನಾನು ಮಾತ್ರ
ಹೊಸ ನಸುಕಿನಲ್ಲೆದ್ದು ದಿಗ್ದೇಶಗಳಿಗೆ
ಲಗ್ಗೆಯಿಡಲೆಂದು ಹೊರಟವನು,
ಮೊದಲ ಹೆಜ್ಜೆಗಳಲ್ಲಿ ಗೆಜ್ಜೆಗಿಲುಕಿನ ಹಿಗ್ಗ
ತುಳುಕಿಸುತ ನಡೆದವನು,
ಕೆಲ ಕಾಲದಲ್ಲೆ ಶಿಖರಕ್ಕೇರಿ ಮೆರೆದವನು
ಮುಂದೇಕೊ
ದಿನದಿನಕು ಬದಲುವ ಹವಾಮಾನಕೊಳಗಾಗಿ
ಹತ್ತಾರು ತರದ ನೀರು ಕುಡಿದು, ಗಾಳಿಯನುಂಡು
ಓರೆಕೋರೆಗಳಲ್ಲಿ ದಾರಿತಪ್ಪಿ.
ಎತ್ತ ಹೊರಳಿದರತ್ತ ಆಡೆತಡೆಗಳೇ ಹೆಚ್ಚಿ
ಎಳೆತ ಸೆಳೆತಗಳೆಲ್ಲ ಸಡಿಲುಬಿದ್ದು.
ಕನಸುಗಳು ಕಳೆಗುಂದಿ, ಕೈಕಾಲ ಬಲವುಡುಗಿ,
ಹಾಗೂ ಹೀಗೂ ತೋಲುಹಿಡಿದು ಸಾವರಿಸುತ್ತ,
ಕುಂಟುತ್ತ ಕೂರುತ್ತ
ಮುವ್ವತ್ತು ವರ್ಷಗಳ ಮೇಲೆ ಮರಳಿದ್ದೇನೆ
ಬಾಲ್ಯದೀ ಸಖನ ಸಹವಾಸ ಬಯಸಿ.
ಕರುಬುತ್ತ ನಿಂತಿದ್ದೇನೆ
ಬಂಗಾರಗೆಂಪು ಹೂಹಿಡಿದ ರೆಂಬೆಗಳಡಿಗೆ
ಹೋಲಿಸುತ ನನ್ನ ದುರ್ದಶೆಯೊಡನೆ
ಇದರ ಈ ಬೇರ್ಬಿಟ್ಟು ನಿಂತಲ್ಲೆ ನಿಂತ
ನಿಶ್ಚಿಂತ ದಿಲ್ದಾರತನ !

CC-O. In Public Domain. Digitized by eGangotri

ಉದ್ವಿಗ್ನ

ದಿಗ್ಗನೆದ್ದೆ,
ಉದ್ವಿಗ್ನನಾಗಿದ್ದೆ,
ದಿನರಾತ್ರಿ ಕಾಡಿಸುವ ಈ ಜೀವಯಾತನೆಗೆ.
ರೇಗಿದ್ದೆ ಇಲ್ಲಿನೀ ಸುಖದುಃಖಗಳ ವಿಷಮ ವಿತರಣೆಗೆ.
ಕೂಗಿದ್ದೆ : ಇಲ್ಲಿನೀ ಅಂದಾದುಂದಿ ಕಾರಭಾರು ನಡೆಸಿದವರ್‍ಯಾರು ?
ಒಬ್ಬೊಬ್ಬಗೊಂದೊಂದು ಥರದ ಭೋಗದ ಸರಕ ಬಡಿಸಿದವರ್‍ಯಾರು ?
ನನ್ನ ಪಾಲಿಗೆ ಬಂದ ಈ ದಾರುಣ ವ್ಯಥೆಗೆ ಕಾರಣವೇನು ?
ಎರಗಿದ್ದು ಪ್ರಾಣಭಂಜಕವಾದ ಸಿಡಿಲೆ ಆದರೆ ಮುಂದೆ ತಾರಣವೇನು ?

ಯಾವುದಕ್ಕೂ
ಒಂದು ಮಿತಿಯೆಂಬುದಿರಬೇಡವೆ ?
ಅರ್ಹತೆಯೆಂಬುದಿರಬೇಡವೆ ?
ಈ ಘೋರ ಶಾಸನಕೆ ಪಾತ್ರನಾಗಲು
ನಾನು ಗೈದುದಾದರೂ ಏನು ?
ನೂರಾರು ಪರಿಯಾಗಿ
ಪರಿತಪಿಸಿ ಶಪಿಸಿದೆ
ನವೆದೆ ಸವೆದೆ
ಸುತ್ತುವರಿದಿವೆ ನಿರುತ್ತರವಾಗಿ
ನಿರ್ವಿಕಾರ ಮುದ್ರೆಯು ತಳೆದು
ನೆಲ ಬಾನು !

CC-O. In Public Domain. Digitized by eGangotri

ವ್ಯಾಧಿ

೧

ತಜ್ಞರೆಲ್ಲ ಹೇಳಿದರು :
"ಇದು ಬುನಾದಿಯಲ್ಲೇ ಎಲ್ಲೋ
ಆಯಕಟ್ಟಿನ ಸ್ಥಲದಲ್ಲಿ ಮೂಡಿದ ಬಿರುಕಿನ ಫಲ.
ಆಶ್ಚರ್ಯವೆಂದರೆ ಹೀಗೆ ಆಗುವದು–
ಆದರಲ್ಲೂ ನಿಮ್ಮಂಥ ದೃಢಕಾಯ ತರುಣರಿಗೆ ಅತ್ಯಂತ ವಿರಲ.
ನಿಮಗಷ್ಟೇ ಹೀಗೇಕೆ ಆಗಬೇಕೊ ?
ಅದನ್ನು ಸೃಷ್ಟಿಕರ್ತನೊಬ್ಬನೇ ಬಲ್ಲ.

ನಮಗೆ ತಿಳಿದಿರುವ ಮಟ್ಟಿಗೆ
ಇದಕ್ಕೆ ಯಾವ ಇಲಾಜೂ ಇಲ್ಲ.

ಇದೀಗ ಕಾಣುತ್ತಿದೆಯಲ್ಲ ಒಂದಿಷ್ಟು ಕಾಲಿಳಿತ
ಒಂದಿಷ್ಟು ಕೈ ನಡುಕ
ಇದು ಅನಿಷ್ಟ ಸೂಚಿ ಮಾತ್ರ.
ಇದೇ ಮುಂದೆ ಇಂದಿಗಿಂತ ನಾಳೆ ಹೆಚ್ಚು
ಇಂದಿಗಿಂತ ನಾಳೆ ಹೆಚ್ಚು ಆಗುತ್ತಾ ಹೋಗಿ
ಯಾವ ಹಂತದಲ್ಲಿ ಅಂಗ ವೈಕಲ್ಯದ
ಎಂಥ ಭಾರೀ ದುರಂತಕ್ಕೆ ಕೈಹಾಕಿತೋ
ಹೇಳುವದು ಕಷ್ಟ.

CC-O. In Public Domain. Digitized by eGangotri

ಕಳ್ಳ ಹೆಜ್ಜೆಗಳಿಂದ ಮುಂದುವರಿಯುತ್ತ,
ಮರ್ಮಸ್ಥಾನಗಳನ್ನೆಲ್ಲ ಒಂದೊಂದಾಗಿ
ಆಕ್ರಮಿಸಿ ಹಾಳುಗೆಡಹುವದು
ಇದರ ಲಗ್ಗೆಯ ವಿಶಿಷ್ಟ ದುಷ್ಟ ವಿಧಾನ.
ಮೊದಮೊದಲು ಅಸ್ಪಷ್ಟ ನಿಧಾನ.
ಆಮೇಲೆ ಒಮ್ಮೆಲೇ ವಿಧವಿಧದ ವಿಘಟನ.

ಇಷ್ಟೆಲ್ಲ ಇದ್ದೂ ಇದು
ತಾನಾಗಿ ಎಂದೂ ಕೊಲ್ಲುವುದಿಲ್ಲ,
ಅಡ್ಡ ಕೆಡವಬಹುದು ಚಿತ್ರಹಿಂಸೆ ಕೊಡಬಹುದು ಆದರೆ ಕೊಲ್ಲುವದಿಲ್ಲ."

ತಜ್ಞರೆಲ್ಲ ಒಂದೊಂದಾಗಿ ತಮ್ಮದೇ ಆದ
ಅಪ್ಪಟ ಪರಿಭಾಷೆಯಲ್ಲಿ ಪಾಠ
ಒಪ್ಪಿಸಿ ವಿರಮಿಸಿದಾಗ
ಇದು ತಜ್ಞರ ವರದಿಯೋ ? ಮೇಲಿಂದ ಬಂದ
ಆಮರಣ ದೇಹ ದಂಡನೆಯ ಫರ್ಮಾನೊ ?
ತಿಳಿಯಲೇ ಇಲ್ಲ.
ಆರೋಪ ಹೊರಿಸದೇ, ಅಪರಾಧ ತಿಳಿಸದೇ
ಗುಟ್ಟಿನಲ್ಲೇ ನ್ಯಾಯ ನಿರ್ಣಯವನೆಲ್ಲ
ಮುಗಿಸಿ
ಜಾರಿಯಲ್ಲೂ ತಂದು ತೀರ್ಮಾನ.
ಇಂಥ ಬಡ ಜೀವವನು ಹೀಗೆ ತೊತ್ತಳ ತುಳಿದು
ಸತ್ತೆ ಮೆರೆಯಿಸಿದ ಸರ್ವತಂತ್ರ
ಸ್ವತಂತ್ರ ಸೃಷ್ಟಿಕರ್ತನ ಈ ಅಗಾಧ
ಅಬೋಧ ವರ್ತನಕೆ
ಯಾವ ಧ್ವನಿಯೂ ಹೊರಡಲಿಲ್ಲ.
ನರನಾಡಿಯಲ್ಲಿಳಿದು ಗದಗದ ನಡುಗಿಸಿದ
ಭಯಕ್ಕೆ ಮಾತ್ರ ಬರೀ ಚೀರಬೇಕು ಎನ್ನಿಸಿತು
ಅಷ್ಟೇ.

CC-O. In Public Domain. Digitized by eGangotri

೨

ದೇಹದ ಇಡೀ ಇಮಾರತ್ತೇ ಕುಸಿಯುತ್ತಿದೆ
ಇಷ್ಟು ದಿನ ಭದ್ರ ಬಿಗಿ ಹಿಡಿದ
ಜೀವದ ಬಂಧ ಹಿಸಿಯುತ್ತಿದೆ.

ಇದ ತಡೆಯ ಬಲ್ಲಂಥ ದೋರ್ದಂಡ ಬಲವೆಲ್ಲಿ ?
ಸಾವರಿಸಿ ಹಿಡಿವಂಥ ಭೀಮ ಬಾಹು ?
ಅಂಜಿ ಹೌಹಾರಿ ಕಂಗಾಲಾದ ಜೀವಕ್ಕೆ
ಮೊರೆಯಿಡಲು ಎಲ್ಲಿ ತಾವು ?
ನೆತ್ತಿ ಮೇಲೆ ಸದಾ ನಿಶ್ಶಬ್ದ ಪತನ ಭಯ
ದಿನ ದಿನವೂ ಬಳಿ ಸಾರೆ ಕೊನೆಯ ಪ್ರಹರ
ಯಾವ ಅಗೋಚರನ ಆಸರೆಗೆ ಅಂಗಲಾಚಲಿ
ಉರುಳಿದರೆ ಪ್ರಾಣಘಾತಕ ಪ್ರಹಾರ ?

ಯಾವರ್ಥಪೂರ್ಣ ಸಂಕೇತಗಳ ಯೋಜಿಸಲಿ
ಈ ಅನರ್ಥವ ಮೂರ್ತಗೊಳಿಸೆ
ಯಾವ ಸಮರ್ಥ ಪ್ರತಿಮಾ ವಿಧಾನ ?
ಮಾತು ಸಾಲದು ಇಲ್ಲಿ. ನಾಲಗೆಯು
ಸೋಲುತ ಬಂತು
ಬದುಕಾಗುತಿದೆ ಅರ್ಥಹೀನ.

ಬಾಯ್ಗೆ ಬಂದಂತೆ ಬೈಗುಳ ಮಸೆದು
ಎಸೆಯಲೇ ಕಾಣದ ನಿಯತಿಯ ಮುಖಕ್ಕೆ
ರೋಸಿ ಪ್ರತಿಭಟಿಸಲೇ ಪ್ರಾಣದಾತನ
ಈ ಅಕಾರಣ ನಿರ್ದಯತನಕ್ಕೆ.

ಈ ಸಣ್ಣ ದನಿಯನ್ನು ಕೇಳುವವರ್ಯಾರಿಲ್ಲಿ
ಸುತ್ತಲೂ ನಿರುತ್ತರದ ಮೌನ
ಈ ಪ್ರಪಂಚದ ಭಾರ ಹೊತ್ತವಗಾದರೂ ಗೊತ್ತೆ
ನಾನಿಲ್ಲಿ ಪಡುತಿರುವ ಬನ್ನ ?

Sri Vidyabharathi Book Centre, Sringeri

CC-O. In Public Domain. Digitized by eGangotri

೩

ಬರಿ ಕಪೋಲ ಕಲ್ಪಿತವಲ್ಲವು ಈ ಕುತ್ತು
ಇದು ಪ್ರತ್ಯಕ್ಷ, ಇದು ಸಾಕ್ಷಾತ್ತು
ಚಹರೆಯೇ ಇಲ್ಲದ ಇದರ ವಿಕರಾಳ ಮುಖ
ಹೆಜ್ಜೆ ಹೆಜ್ಜೆಗೂ ಹುಟ್ಟಿಸುವ ಎದೆ ನಡುಕ
ವ್ಯಾಧಿಗ್ರಸ್ತನೊಬ್ಬನಿಗೇ ಗೊತ್ತು
ಇದ ಬಣ್ಣಿಸಲಳಿಸುವ ಬರಿ ಮಾತು
ಏನನ್ನೂ ಹಿಡಿಯಲು ಬಾರದ ತೂತು.

CC-O. In Public Domain. Digitized by eGangotri

ಕನಸಿನಲ್ಲೂ ಎಣಿಸಿರಲಿಲ್ಲ

ಕನಸಿನಲ್ಲೂ ಎಣಿಸಿರಲಿಲ್ಲ
ಹಿಂದೊಮ್ಮೆ ತಂದೆಯನ್ನು ಬಾಧಿಸಿದ ದುಃಖ
ಇಂದು ಮಗನನ್ನೂ ವ್ಯಾಧಿಸೀತೆಂದು.
ಚರಿತ್ರೆಯೆಂದು ಹಾಡಿದ ಗೀತ
ಆತ್ಮಚರಿತ್ರೆಯಾಗಿ ವೇಧಿಸೀತೆಂದು.

CC-O. In Public Domain. Digitized by eGangotri

ಒಳಸಂಚು

ವ್ಯಕ್ತಿ ಬೇರೆ ವ್ಯಾಧಿ ಬೇರೆ
ಉಳಿದ ಎಲ್ಲ ಮಾಟವೂ
ಥೇಟು ರಂಗತಾಲೀಮಿನ ಥರ
ಮರಳಿ ದುಃಖಗೀತವು.

ಅದೇ ಕಥಾನಕದ ನಟನೆ
ಅದೇ ಭಯಾನಕದ ಘಟನೆ
ನಿರುತ್ತರದ ಅಡ್ಡಗೋಡೆ
ತಡೆದಟ್ಟುವ ಪ್ರಶ್ನಮಾಲೆ
ಅದೇ ಗೀತದೇ ಪರಿ
ಭೂತದ ಪುನರಾವರ್ತಕೆ ಗಾಬರಿಗೊಂಡಿದೆ ಜೀವ
ಎಂಥ ಹೊಂಚು ಕಾದಿವೆಯೊ ಕಾಲನ ಒಳಸಂಚಲ್ಲಿ.

CC-O. In Public Domain. Digitized by eGangotri

ಭೀತಿ–೧

ದಾಪುಗಾಲಿನ ಹೆಜ್ಜೆ ಹಾಕುತ
ಬೆನ್ನ ಹಿಂದೇ ಬರುತಿದೆ
ಸಪ್ಪಳಿಲ್ಲದ ನಡಿಗೆಯಲ್ಲೇ
ಏನೋ ಜಪ್ಪಿಸುವಂತಿದೆ.

ಹೊರಳಿ ನೋಡಲೆ ಧೈರ್ಯ ಸಾಲದು
ಎದುರಿಗೋ ಹೆಡೆ ಬಿಚ್ಚಿ ಹಬ್ಬಿದೆ
ಇದರ ಬೃಹದಾಕಾರ ಭೀಕರ ಛಾಯೆಯು
ಯಾವ ಲೋಕದ ಪ್ರಾಣಿಯೊ ಇದು ?
ಭಯದಿ ಜನಿಸಿದ ಮಾಯೆಯೊ ?

CC-O. In Public Domain. Digitized by eGangotri

ಭೀತಿ–೨

ಪ್ರತಿಯೊಂದು ಮುಂದಿನ ಹೆಜ್ಜೆ
ಇನ್ನಷ್ಟು ಇನ್ನಷ್ಟು ಒಜ್ಜೆ
ಪ್ರತಿಯೊಂದು ಮುಂದಿನ ಮಾತು
ಇನ್ನಷ್ಟು ಇನ್ನಷ್ಟು ಸೋತು
ಹೋಗಿದೆ ಎಲ್ಲೋ ಹೂತು.

ಆಯ್ಯೋ ಇದು ಯಾತರ
ನಿಶಾನೆ ಗುರುತು ?
ಭೀತಿಯ ಕಂದರಗಳ ಕಗ್ಗತ್ತಲು
ಸುತ್ತು ಮುತ್ತಲು!

CC-O. In Public Domain. Digitized by eGangotri

ಲಕ್ಷಣಗಳು

ಮುಖವಾಡ ತೊಟ್ಟಂತೆ
ಹಾವಭಾವಗಳ ಕಳಕೊಂಡ ಮೋರೆ
ದುರುಗುಟ್ಟುವವರಂತೆ
ತರುಲತೆಯ ಕಳಕೊಂಡ ನೆಟ್ಟ ನಜರು.
ತೋಲು ಹಿಡಿಯದೆ ತಾಳಲಯಗಳನು ಕಳಕೊಂಡ
ಅಸ್ಥಿರ ಅತಂತ್ರ ನಡೆ, ಇತ್ಯಾದಿ.

ಅದನು ಕಳಕೊಂಡ ಇದನು ಕಳಕೊಂಡ
ಈ ಪೆಡಂಭೂತವನ್ನು
ನನ್ನದೇ ವಿರೂಪವನ್ನು
ನನ್ನದೇ ಕುರೂಪವನ್ನು
ಯಾವ ಕಣ್ಣಿನಿಂದ ನೋಡಲಿ ?

ಲಾಕ್ಷಣಿಕರೇ ಬಣ್ಣಿಸಿರುವ
ವಾಸ್ತವವೇ ಸಾಲದೆಂದು
ತಂತ್ರ ನಿಪುಣರ ತಲೆದೂಗಿಸೆ
ಇನ್ನಷ್ಟೂ ಬಣ್ಣ ಬಳಿದು
ಯಾವ ಪ್ರತಿಮೆ ಪ್ರತೀಕಗಳ ಆಟ ಹೂಡಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂಸ್ರಪಶು

ಮದ್ದು ಕೊಟ್ಟು ಮುದ್ದು ಕೊಟ್ಟು
ನಿದ್ದೆ ಬರಿಸೆ, ಸುಮ್ಮಗಾಗಿ
ಗಂಟೆ ಕಾಲವಷ್ಟೆ. ಮತ್ತೆ ಎಚ್ಚತ್ತರೇ ಶುರು
ಗೋಣ ಮುರಿವೆನೆಂಬ ಕ್ರೂರ
ವ್ಯಾಘ್ರಮುಖದ ಗುರು ಗುರು.

ಮದ್ದುಕೊಳುವ ಮುದ್ದುಕೊಳುವ
ಹಿಂಸ್ರ ಪಶುವಿನನುನಯ
ಎಷ್ಟು ಕಾಲ ತಡೆದೀತೋ
ಅಡಿಗಡಿಗೂ ಅದೇ ಭಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಡಿಕೆ

ಹೆಳವನ ಮಾಡದಿರಯ್ಯ ತಂದೆ !
ಹೆಳವನ ಮಾಡದಿರೋ
ನೀನೆ ಇತ್ತ ಅಂಗಾಂಗದ ಬಂಧವ
ಅಂದವ ಕೆಡಿಸದಿರೋ.

ನೀನೆ ಇತ್ತ ಕೈಕಾಲ್ಗಳ ಈ ಬಲವ
ನಿರ್ವ್ಯಂಗವಾದ ನಡಿಗೆಯ ಈ ಸುಖವ
ಹಾವ ಭಾವ ಪರಿಪೂರ್ಣ ಹಸನ್ಮುಖವ
ಕೆಡಿಸದಿರಯ್ಯಾ
ಕೆಡಿಸದಿರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷಿ

ನಿಂತ ನಿಂತಲ್ಲೆ ಗೊತ್ತಾಯ್ತು,
ನೆತ್ತಿಗೇರಿದ ಸೂರ್ಯ ಇಳಿಯ ಹತ್ತಿದ್ದಾನೆ,
ಹೊತ್ತಾಯ್ತು.

ಇಂತಹ ಇಳಿಗಾಲದಲ್ಲೂ
ಉಳಿದ ಅಲ್ಪಕಾಲದಲ್ಲೂ
ಮತ್ತೆ ಬೆಳಸ ಬೆಳೆಯೆನೆ ?
ಹರಗ ಬರದೆ ಬಿಟ್ಟ ಹೊಲವೆ
ಬಂಜೆ ಬಂಜರೆಂದ ನೆಲವೆ
ಒಳಗಿನೊಳಗೆ ಮರಳಿ ಪಡೆದು
ಒಳಸೆಲೆಗಳ ರಸವನು
ತನ್ನ ಮೂಲ ಕಸುವನು
ಹಾಲ್ದೆನೆಗಳು ತುಂಬಿ ತೊನೆವ
ಭರ್ತಿ ಪೈರ ನಿಲಿಸೆನೆ ?

ಮಳೆ ಗಾಳಿ ಬಿಸಿಲುಗಳು
ಉಣ್ಣಿಸುತಿವೆ, ಹಣ್ಣಿಸುತಿವೆ
ನಿತ್ಯ ಬೀಜ ಧಾರಣೆ.

ಬಾಳ ಕೃಷಿಯ ರಸಾಯನಿಯ ಗುಟ್ಟನೆಲ್ಲ ಬಲ್ಲರಾರು ?
ಪಂಚಭೌತದೀ ಪವಾಡದಲ್ಲಿ ನಮ್ಮದೆಷ್ಟುಪಾಲು ?

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

'ಸಂಪರ್ಕ' ಎಂಬ ಈ ಕವನಸಂಗ್ರಹದಲ್ಲಿ ಇತ್ತೀಚೆಗೆ ಶ್ರೀ ಗಂಗಾಧರ ಚಿತ್ತಾಲರು ಬರೆದಿರುವ ಕವಿತೆಗಳಿವೆ.

ಸಂಪರ್ಕ ಎಂಬ ಕವಿತೆಯಲ್ಲಿ ಸೃಷ್ಟಿಕ್ರಮವನ್ನು ಕಾಣುವ ವಿಸ್ಮಯದ ಭಾವ ಪ್ರಕಟವಾಗಿದೆ.

*

ಈ ಕಾವ್ಯಭಾಗದಲ್ಲಿ 'ಅರ್ಥ', 'ಅನರ್ಥ', 'ಅರ್ಥಹೀನ', 'ಸಮರ್ಥ' ಈ ಶಬ್ದಗಳ ಯೋಜನೆಯಲ್ಲಿ ಎಂಥ ಕಲಾತ್ಮಕತೆ ಅಡಗಿದೆಯೆಂಬುದನ್ನೂ ಹೆಚ್ಚು ವಿವರಿಸುವ ಅಗತ್ಯವಿಲ್ಲ. 'ಅರ್ಥ' ಎನ್ನುವ ಶಬ್ದ ಜೀವನ ಮತ್ತು ಕಾವ್ಯ ಇವೆರಡನ್ನೂ ಒಂದಾಗಿ ಬೆಸೆಯುತ್ತದೆ ಮತ್ತು ಹಾಗೆ ಬೆಸೆಯುವ ಕ್ರಿಯೆಯ ಮೂಲಕವಾಗಿ ಚಿತ್ತಾಲರ ಕಾವ್ಯದೃಷ್ಟಿ ಯಾವುದೆಂಬುದನ್ನೂ ಸೂಚಿಸುತ್ತದೆ. ಚಿತ್ತಾಲರ ಕಾವ್ಯನೀತಿ ಅನುಭವ ಮತ್ತು ಅಭಿವ್ಯಕ್ತಿ ಇವೆರಡರ ಪಾವಿತ್ರ್ಯವನ್ನು ಸಮನಾಗಿ ಕಾಯ್ದುಕೊಂಡು ಬಂದಿದೆ.

*

ಹೊಸಗನ್ನಡ ಕಾವ್ಯದಲ್ಲಿ ಅವರದು ಎತ್ತರದ ದನಿಯಾಗಿದೆ. ಧೀರೋದಾತ್ತತೆಯೆ ಅವರ ಕಾವ್ಯದ ಸಮಗ್ರ ಲಕ್ಷಣವಾಗಿದೆ.

— ಕೀರ್ತಿನಾಥ ಕುರ್ತಕೋಟಿ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri